# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 236 |
| ಉತ್ತರಿಸಬೇಕಾದ ದಿನಾಂಕ | : | 12-08-2025 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಯಶಸ್ವಿನಿ ಯೋಜನೆಯ ಫಲಾನುಭವಿಗಳಿಗೆ ಆರೋಗ್ಯ ವೆಚ್ಚಗಳಿಗೆ ಸಹಾಯಧನ ಮಿತಿಯನ್ನು ಯಾವಾಗ ನಿಗಧಿಪಡಿಸಲಾಗಿದೆ; ನಿಗಧಿಪಡಿಸುವಾಗ ಅನುಸರಿಸಿದ ಮಾನದಂಡಗಳಾವುವು; | ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ 2022-23 ರಿಂದ ಮರುಜಾರಿಗೊಳಿಸಿದೆ.<br><br>ಈ ಯೋಜನೆಯನ್ನು ಪ್ರಾರಂಭಿಸಿದಾಗ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸೆಗಳನ್ನು ಮತ್ತು ದರಗಳನ್ನು ಯಥಾವತ್ತಾಗಿ 2022-23ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. ಈ ರೀತಿ ದರ ನಿಗದಿಪಡಿಸುವಾಗ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡ ಮಾನದಂಡಗಳನ್ನೇ ಈ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. |
| ಆ) | ಪ್ರಸ್ತುತ ಸರಕಾರ ಯಶಸ್ವಿನಿ ಫಲಾನುಭವಿಗಳಿಗೆ ಆರೋಗ್ಯ ವೆಚ್ಚಗಳಿಗೆ ಸಹಾಯಧನ ಮಿತಿಯನ್ನು ಪ್ರಸ್ತುತ ಬೆಲೆಯೇರಿಕೆಯ ಮಟ್ಟಕ್ಕನುಸಾರವಾಗಿ ಹೆಚ್ಚಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ; | ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸಾ ದರ ಕಡಿಮೆ ಇದೆ ಎಂದು ಆಸ್ಪತ್ರೆಗಳ ಕೋರಿಕೆಯನ್ನು ಪರಿಗಣಿಸಿ ಸರ್ಕಾರವು ಕೂಡ್ಲಿಗಿ ಕ್ಷೇತ್ರದ ಮಾನ್ಯ ಶಾಸಕರಾದ ಡಾ\|\| ಶ್ರೀನಿವಾಸ ಎನ್.ಟಿ. ಇವರ ಅಧ್ಯಕ್ಷತೆಯಲ್ಲಿ ತಜ್ಞ ವೈದ್ಯರು ಹಾಗೂ ಹಿರಿಯ ಅಧಿಕಾರಿಗಳನ್ನೊಳಗೊಂಡ **ದರ ಪರಿಷ್ಕರಣಾ ಸಮಿತಿಯನ್ನು** ರಚಿಸಿರುತ್ತದೆ. ಸದರಿ ಸಮಿತಿಯು ವಿವಿಧ ದಿನಾಂಕಗಳಲ್ಲಿ ಸಭೆಗಳನ್ನು ನಡೆಸಿ ವರದಿಯನ್ನು ಸಮಿತಿಯ ಅಧ್ಯಕ್ಷರಾದ ಡಾ\|\| ಶ್ರೀನಿವಾಸ ಎನ್.ಟಿ. ರವರು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ದಿನಾಂಕ:22-04-2025 ರಂದು ಸಲ್ಲಿಸಿದ್ದು, ಸದರಿ ವರದಿಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |

| | | |
|---|---|---|
| ಇ) | ಸುರಕ್ಷಾ ಯೋಜನೆಯ ಫಲಾನುಭವಿಗಳ ಆರೋಗ್ಯ ಸೇವೆಗಳಿಗೆ ಅನಗತ್ಯವಾಗಿ ಹೆಚ್ಚುವರಿ ಬಿಲ್ಲು ನೀಡಿ ಶೋಷಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ದಾಖಲಾದ ದೂರುಗಳಿಗೆ ವಹಿಸಿದ ಕ್ರಮಗಳೇನು ಮತ್ತು ಇದನ್ನು ನಿಯಂತ್ರಿಸಲು ಪರಿಣಿತ ವೈದ್ಯರ ಸಮಿತಿ ರಚಿಸಲಾಗುವುದೇ: | ಯಶಸ್ವಿನಿ ಯೋಜನೆಗೆ ಅನ್ವಯಿಸುವುದಿಲ್ಲ. |
| ಈ) | ಯಶಸ್ವಿನಿ ಯೋಜನೆಯ ಸಹಾಯಧನ ನೀಡುವಾಗ ಗಾಯದ ಮತ್ತು ವ್ಯಕ್ತಿಯ ಛಾಯಚಿತ್ರ ನೀಡುವಂತೆ ಅಗತ್ಯ ಪಡಿಸಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ: | ಯಶಸ್ವಿನಿ ಯೋಜನೆಯನ್ನು ಆಸ್ಪತ್ರೆಗಳಾಗಲಿ ಅಥವಾ ಫಲಾನುಭವಿಗಳಾಗಲಿ ದುರುಪಯೋಗ ಮಾಡಿಕೊಳ್ಳುವುದನ್ನು (fraud & Impersonation) ತಪ್ಪಿಸಲು ಹಾಗೂ ಚಿಕಿತ್ಸೆ ಪಡೆಯುವ ನೈಜ ಫಲಾನುಭವಿಗಳನ್ನು ದೃಢಪಡಿಸಿಕೊಳ್ಳಲು ಆ ವ್ಯಕ್ತಿಯ ಮುಖ ಚಿತ್ರದೊಂದಿಗೆ On Bed Photo ಅನ್ನು ಯಶಸ್ವಿನಿ ಯೋಜನೆಯ protocol guidelines ನಂತೆ ನಿಗದಿಗೊಳಿಸಲಾಗಿದೆ. |
| ಉ) | ಇತರ ಸರಕಾರಿ ಮತ್ತು ಖಾಸಗಿ ಜೀವ ವಿಮಾ ಅಥವಾ ಆರೋಗ್ಯ ವಿಮಾ ಯೋಜನೆಗಳಿಗೆ ಅನ್ವಯಿಸದ ಫಲಾನುಭವಿಗಳ ಅದರಲ್ಲೂ ಮಹಿಳಾ ಫಲಾನುಭವಿಗಳ ಚಿಕಿತ್ಸೆ ಪಡೆದ ದೇಹದ ಭಾಗಗಳ ಛಾಯಚಿತ್ರ ಸಲ್ಲಿಸುವಂತೆ ಯಶಸ್ವಿನಿ ಫಲಾನುಭವಿಗಳಿಗೆ ಅಗತ್ಯಪಡಿಸಿರುವ ಕಾರಣಗಳೇನು: ಈ ನಿಯಮಗಳನ್ನು ಸಡಿಲಿಸಲಾಗುವುದೇ? | ಯಶಸ್ವಿನಿ ಯೋಜನೆಯು ವಿಮಾ ಯೋಜನೆಯಾಗಿರುವುದಿಲ್ಲ. ಬದಲಾಗಿ ಇದು ಒಂದು ಸ್ವಯಂ ನಿಧಿ ಆರೋಗ್ಯ ರಕ್ಷಣಾ (Self Financed Health Assurance Scheme) ಯೋಜನೆಯಾಗಿರುತ್ತದೆ. ಯಶಸ್ವಿನಿ ಯೋಜನೆಯಲ್ಲಿ ಅರ್ಹ ಮತ್ತು ನೈಜ ಫಲಾನುಭವಿಗಳಿಗೆ ಮಾತ್ರ ಚಿಕಿತ್ಸೆ ಸೌಲಭ್ಯ ಸಿಗಬೇಕೆಂಬ ಸದುದ್ದೇಶದಿಂದ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿರುವ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಮತ್ತು AB-PMJAY ಮುಂತಾದ ಯೋಜನೆಯಲ್ಲಿನ protocol ನಂತೆ ಯಶಸ್ವಿನಿ ಯೋಜನೆಯ protocol ನಲ್ಲೂ ಅಳವಡಿಸಿಕೊಂಡು ಫಲಾನುಭವಿ ವ್ಯಕ್ತಿಯ ಮುಖ ಛಾಯಚಿತ್ರದೊಂದಿಗಿನ On Bed Photo, ಹಾಗೂ Pre & Post Operative Photo ಮತ್ತು scar photo ಗಳನ್ನು ಒದಗಿಸಲು ತಿಳಿಯಪಡಿಸಲಾಗಿದೆ. ಇಂತಹ ದಾಖಲೆಗಳನ್ನು fraud & Impersonation ನ್ನು ತಡೆಗಟ್ಟಲು ಮತ್ತು ಅರ್ಹ ನೈಜ ಫಲಾನುಭವಿಗಳಿಗೆ ಮಾತ್ರ ಚಿಕಿತ್ಸೆ ದೊರಕುವಂತೆ ಮಾಡಲು ಅಳವಡಿಸಿಕೊಳ್ಳಲಾಗಿದೆ. |

**ಸಂಖ್ಯೆ: ಸಿಒ 211 ಸಿಎಲ್‌ಎಸ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ